ಆಶ್ವಾಸನೆ ಕೊಟ್ಟಿದ್ದರು. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಯಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿಯೂ ಕೂಡ ಕೃಷಿ ಕಾಲೇಜನ್ನು ತೆಗೆಯುವದಕ್ಕೆ ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಪೂರ್ವಭಾವಿ ತಯಾರಿ ಮಾಡುತ್ತಿದ್ದೇವೆ ಮುಂದಿನ ವರ್ಷದ ಆದಿಯಲ್ಲಿ ಈ ಕಾಲೇಜನ್ನು ಪ್ರಾರಂಭ ಮಾಡುತ್ತೇವೆ.

Sri K. C. Modgekar : Sir, I have not received the reply to my unstarred question regarding imposition of purchase tax and turnover tax on sugarcane.

Mr. Speaker : I have not come to that point.

ತಡೆಹಿಡಿಯಲಾದ ಪ್ರಶ್ನೆಗಳು

ಅಧ್ಯಕ್ಷರು : ಶ್ರೀ ರೇವಣ್ಣನವರೆ, ನಿಮ್ಮ ಪ್ರಶ್ನೆ ೧೦ (೧೩೮) ಒಂದನೇ ಪಟ್ಟಿಯದು, ಇದಕ್ಕೆ ಮಾನ್ಯ ಮಂತ್ರಿಗಳು ಟೈಮ್ ಬೇಕೆಂದು ಕೇಳಿದ್ದಾರೆ.

ಶ್ರೀ ಹೆಚ್. ಎಂ. ರೇವಣ್ಣ : ಇವತ್ತೂ ಕೂಡ ನನ್ನದೊಂದು ಪ್ರಶ್ನೆ ಇತ್ತು ಅದಕ್ಕೂ ಉತ್ತರ ಬರಲಿಲ್ಲ. ಹೋದ ತಿಂಗಳು ೧೯ನೇ ತಾರೀಖು ಬಂದಿದ್ದಂಥ ಈ ಪ್ರಶ್ನೆಗೂ ಸಹ ಇನ್ನೂ ಉತ್ತರ ಬರಲಿಲ್ಲ. ಈ ರೀತಿ ಆದರೆ ಹೇಗೆ ?

ಅಧ್ಯಕ್ಷರು : ಏನು ಮಾಡೋಣ ಹೇಳಿ ? ಈ ಸೆಷನ್‌ನಲ್ಲಿ ಇದನ್ನು ತಡಹಿಡಿಯುತ್ತೇನೆ. ಈ ಪ್ರಶ್ನೆಗೆ ಗುರುವಾರ ಉತ್ತರ ಒದಗಿಸಿಕೊಡುತ್ತೇವೆ.

ವಿಷಯ : ಹಳ್ಳಿಗಾಡಿನ ಪ್ರದೇಶಗಳಲ್ಲಿ ನಿವೇಶನ ಇಲ್ಲದವರಿಗೆ ನಿವೇಶನ ದೊರಕಿಸಿ ಕೊಡುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ : ೭೪(೮೭)

ಶ್ರೀ ಎಂ. ವಿ. ವೆಂಕಟಪ್ಪ (ಮುಳುಬಾಗಿ ೨) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ನಿವೇಶನರಹಿತ ಕುಟುಂಬಗಳೆಷ್ಟು ?

ಆ) ಹಳ್ಳಿಗಾಡಿನ ಪ್ರದೇಶಗಳಲ್ಲಿ ನಿವೇಶನಗಳಿಲ್ಲದವರಿಗೆ ನಿವೇಶನ ದೊರಕಿಸಿ ಕೊಡಲು ಕಂದಾಯ ಇಲಾಖೆಯವರು ಆದೇಶದ ಮೇರೆಗೆ ಒಟ್ಟು ಎಷ್ಟು ಎಕರೆಗಳು ದೊರೆಯುವ ಸಂಭವವಿದೆ ? (ಜಿಲ್ಲಾವಾರು ಸಂಖ್ಯೆ ಒದಗಿಸುವದು)

ಇ) ಅದರಲ್ಲಿ ಸರ್ಕಾರಿ ಮತ್ತು ಖಾಸಗಿಯವರಿಗೆ ಸೇರಿದ ಜಮೀನಿನ ವಿಸ್ತೀರ್ಣವೆಷ್ಟು ?

ಈ) ಖಾಸಗೀ ಜಮೀನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದವರು ನೀಡಿರುವ ಪರಿಹಾರದ ಒಟ್ಟು ಹಣವೆಷ್ಟು ?

ಉ) ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ನಿಧಾನವಾಗದಂತೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) : ಅ) ೬೩,೬೬೭ (ಅನುಬಂಧದಲ್ಲಿ ನೋಡುವುದು).

ಆ) ೩೦,೦೭೦,೪೬ (ಅನುಬಂಧದಲ್ಲಿ ನೋಡುವುದು)

ಇ) ಸರ್ಕಾರಿ ಜಮೀನು : ೨೩೬೩೧.೦೭

ಖಾಸಗೀ ಜಮೀನು : ೬೪೫೯.೩೯

ಒಟ್ಟು : ೩೦೦೭೦.೪೬

ಈ) ರೂ ೭,೫೬ ೪೯,೨೧೨–೩೯

ಉ) ಗ್ರಾಮಾಂತರ ಪ್ರದೇಶದ ನಿವೇಶನರಹಿತರಿಗೆ ನಿವೇಶನ ಹಂಚಲು ಸರ್ಕಾರ ತ್ವರಿತ ಕ್ರಮ ತೆಗೆದುಕೊಳ್ಳಲಾಗಿದೆ. ಎಲ್ಲೆಲ್ಲಿ ಸರ್ಕಾರಿ ಜಮೀನುಗಳು ಇರುವುದಿಲ್ಲ ಅಂತಹ ಜಿಲ್ಲೆಗಳಲ್ಲಿ ಖಾಸಗಿ ಜಮೀನು ವಶಪಡಿಸಿಕೊಳ್ಳಲಾಗುತ್ತಿದೆ.

ಈ ಹಿಂದೆ ಅನೇಕ ಪ್ರಕರಣಗಳಲ್ಲಿ ಖಾಸಗಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡು ನಿವೇಶನಗಳನ್ನು ಹಂಚಲಾಗಿದೆ. ಈ ಪೈಕಿ ಕೆಲವು ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಇದ್ದು ಅಂತಿಮ ತೀರ್ಮಾನವನ್ನು ಕಾಯಲಾಗಿದೆ. ಹೊಸದಾಗಿ ಖಾಸಗಿ ಜಮೀನು ಅವಶ್ಯವಿದ್ದಲ್ಲಿ ಸ್ವಾಧೀನ ಪಡಿಸಿಕೊಳ್ಳಲು ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ANNEXURE

Sl. No.	Districts	No. of siteless persons	Total land available	Government land	Private and	Compensation paid Rs.
1	2	3	4	5	6	7
1	Raichur	3,203	407.20	–	407.20	46,248.40
2	D. Kannada	3.766	947.24	947.24	–	–
3	Bidar	15,420	771.00	–	771.00	1 81,907.75
4	Bellary	83,550	215.60	–	215.60	7,00,000.00
5	Mandya	72,549	820.00	–	820.00	13,14,584.00
6	U. Kannada	15,269.00	–	–	–	83,286.00
7	Bijapur	54,587	2800.00	600.00	2200.00	150,00,000.00
8	Gulbarga	41,646	Survey in progress			16,41,000.00
9	Mysore	95,048	2423.29	2423 29	–	107,29,000.00
10	Bangalore (R)	28,763	–	–	–	–
11	Belgaum	99 517	–	–	–	42,64,000.00
12	Chitradurg	63,990.00	–	–	–	43,00,000.00
13	Tumkur	27,731	896.37	394.19	502.18	269,75,000.00
14	Madikere	3,822	125.00	125.00	–	–
15	Dharwad	39,642	67.20	–	67.20	12,89,974.99
16	Kolar	35,286	722.40	375.35	347.05	30,71,822.00
17	Chickamagalur	25,302	1437.00	1410.00	27.00	–
18	Shimoga	50,848	18101.16	17100.00	1001.16	20,52,409.20
19	Bangalore (U)	10,770	337.00	256.00	81.00	–
20	Hassan	66 958	–			
	Total:	837,667	30070.46	23631.07	6439.39	726 49,212.39

ಶ್ರೀ ಎಂ. ವಿ. ವೆಂಕಟಪ್ಪ : ಹಳ್ಳಿಗಾಡು ಪ್ರದೇಶಗಳಲ್ಲಿ ನಿವೇಶನಗಳನ್ನು ಮಾಡುವಾಗ ಕೆಲವು ಬಲಿಷ್ಠ ವ್ಯಕ್ತಿಗಳು ಹಳ್ಳಿಯ ಪಕ್ಕದಲ್ಲಿರುವ ತಮ್ಮ ಜಮೀನನ್ನು ಬಿಟ್ಟುಕೊಡುವುದಕ್ಕೆ ಇಷ್ಟಪಡುವುದಿಲ್ಲ. ಅಂತಹ ಕಡೆ ಅಕ್ವಿಜಿಷನ್ ಮಾಡುವಾಗ ಅದನ್ನು ೯ನೆಯ ಷೆಡ್ಯೂಲ್‌ಗೆ ಸೇರಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ : ೯ನೆಯ ಷೆಡ್ಯೂಲ್ ಎಂದರೆ ಯಾವುದು ಹೇಳಿ, ಕಾನ್‌ಸ್ಟಿಟ್ಯೂಷನ್‌ದೇ ?

ಅಧ್ಯಕ್ಷರು : ಕಾನ್‌ಸ್ಟಿಟ್ಯೂಷನ್‌ದು

ಶ್ರೀ ಬಿ. ಬಸವಲಿಂಗಪ್ಪ : ಜನಗಳಿಗೆ ಸೈಟ್‌ಗಳನ್ನು ಒದಗಿಸಿಕೊಡಬೇಕು. ಪ್ರಭಾವಶಾಲಿ ವ್ಯಕ್ತಿಗಳ ಜಮೀನಿನಲ್ಲೂ ಸೈಟ್ಸ್ ಮಾಡಬೇಕಾಗುತ್ತದೆ. ಸರಕಾರಿ ಜಮೀನಿನಲ್ಲೂ ಮಾಡಬೇಕಾಗುತ್ತದೆ. ಪ್ರಭಾವಶಾಲಿ ವ್ಯಕ್ತಿಗಳು ವಿರೋಧ ಮಾಡುತ್ತಾರೆ. ಆಗ ಸರಕಾರ ಬಲಾತ್ಕಾರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಲ್ಲಿ ಪ್ರಭಾವಶಾಲಿಗಳು ಇದ್ದಾರಲ್ಲ. ಅದಕ್ಕೇ ಈ ಆತಂಕ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಬಿಲ್‌ಗೆ ತಿದ್ದುಪಡಿ ತಂದಮೇಲೆ ಇದೆಲ್ಲಾ ಸರಿಹೋಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ : ಅಂಬೇಡ್ಕರ ಸೆನಟನರಿ ವರ್ಷದಲ್ಲಿ ನಿವೇಶನ ರಹಿತರಿಗೆ ಹೆಚ್ಚು ಹೆಚ್ಚಾಗಿ ನಿವೇಶನಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ : ನಮ್ಮ ರಾಜ್ಯದಲ್ಲಿ ಸುಮಾರು ೬,೩೭,೬೬೭ ಜನ ನಿವೇಶನ ಇಲ್ಲದಿರುವವರು ಇದ್ದಾರೆ. ಈಗ ೩೦ ಸಾವಿರ ಎಕರೆ ಸರಕಾರಿ ಜಮೀನು ಬೇಕಾಗುತ್ತದೆ. ೩೦೦೦.೪ ಎಕರೆಗಳು ಬೇಕಾಗುತ್ತದೆ ಇದರಲ್ಲಿ ಗೌರ್ನಮೆಂಟ್ ಜಮೀನು ೨೩.೬೩೧.೭೦ ಇದೆ. ಇದರಲ್ಲಿ ನಿವೇಶನ ಮಾಡುತ್ತೇವೆ. ಉಳಿದಂತೆ ಖಾಸಗಿಯಾಗಿರುವುದನ್ನು ಅಕ್ವೈರ್ ಮಾಡಬೇಕು. ಅಕ್ವೈರ್ ಮಾಡಿಕೊಳ್ಳುವುದರಲ್ಲಿ ಎಷ್ಟು ಕಷ್ಟ ಇದೆ ಎಂಬುದು ತಮಗೆ ಗೊತ್ತಿದೆ. ಖಾಸಗಿ ಜಮೀನುಗಳನ್ನು ಅಕ್ವೈರ್ ಮಾಡಿದಾಗ ಉಚ್ಚ ನ್ಯಾಯಾಲಯಕ್ಕೆ ರಿಟ್ ಹಾಕಿ ಸ್ಟೇ ಆರ್ಡರ್ ತರುತ್ತಾರೆ. ಈ ರೀತಿ ತಂದು ಆತಂಕ ಮಾಡತಕ್ಕದ್ದು ತಮಗೆ ಗೊತ್ತು. ಈ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತೀವ್ರವಾಗಿ ಅಕ್ವೈರ್ ಮಾಡುವುದು ಮತ್ತು ಗೌರ್ನಮೆಂಟ್ ಜಮೀನಿನಲ್ಲಿ ಸೈಟ್‌ಗಳನ್ನು ಮಾಡಿ ಕೊಡುವ ಕಾರ್ಯಕ್ರಮ ಮಾಡುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ : ಅಂಬೇಡ್ಕರ್ ಸೆನಟನರಿ ಈಯರ್‌ನಲ್ಲಿ ಹೆಚ್ಚು ಹೆಚ್ಚಾಗಿ ೬ ಡವರಿಗೆ ನಿವೇಶನಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ : ಅದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಒಂದು ಲಕ್ಷ ಮನೆಗಳನ್ನು ಕಟ್ಟಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಅದಕ್ಕೋಸ್ಕರ ತೀವ್ರವಾಗಿ ಮಾಡಬೇಕಾಗುತ್ತದೆ. ಅಕ್ವೈರ್ ಮಾಡಿಬಿಟ್ಟು ಇಂತಹ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಎಲ್ಲಾ ಬಡವರಿಗೆ ಹೌಸ್ ಸೈಟ್ಸ್ ಕೊಡುತ್ತೇವೆಂದು ನಾವು ಚುನಾವಣೆಗೆ ಹೋದಾಗ ಹೇಳುತ್ತಿದ್ದೆವು. ಚುನಾವಣೆ ಆಗಿ ಒಂದು ವರ್ಷ ಕಳೆಯಿತು. ಆದಷ್ಟು ಬೇಗ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ಆದಷ್ಟು ಬೇಗ ಎಂದರೆ ಇನ್ನೆಷ್ಟು ದಿವಸ ಆಗುತ್ತದೆ ಎನ್ನುವುದು ಬಹಳ ಮುಖ್ಯ. ಅದನ್ನು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ : ತೀವ್ರತೆಯಿಂದ ಮಾಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಿವೇಶನ ರಹಿತ ಜನರಿಗೆ ನಿವೇಶನಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಆದರೆ ಈಗ ಯಾವ ಗೌರ್ನಮೆಂಟ್ ಆರ್ಡರ್ ಇದೆಯೋ ಆ ಪ್ರಕಾರ ನೀವು ನಿವೇಶನಗಳನ್ನು ಕೊಡುವುದಕ್ಕೆ ಬರುವುದಿಲ್ಲ. ಕಾರಣ ಎರಡು ಸಾವಿರ ರೂಪಾಯಿಗಳ ವಾರ್ಷಿಕ ವರಮಾನದ ಕೆಳಗೆ ಬರತಕ್ಕಂಥವರಿಗೆ ಮಾತ್ರ ತಾವು ನಿವೇಶನ ಕೊಡಬಹುದು. ಆದರ ಮೇಲ್ಪಟ್ಟವರಿಗೆ ಕೊಡುವುದಕ್ಕೆ ಬರುವುದಿಲ್ಲ. ಇವತ್ತು ತಾಲ್ಲೂಕು ಆಫೀಸ್‌ಗಳಿಗೆ ಹೋದರೆ ಅಲ್ಲಿ ಕೂಲಿ ಮಾಡತಕ್ಕಂಥ ಒಬ್ಬ ಮನುಷ್ಯನಿಗೂ ಸಹ ೪ ಸಾವಿರ ರೂಪಾಯಿಗಳ ಇನ್‌ಕಮ್ ಹಾಕಿ ಕೊಡುತ್ತಿದ್ದಾರೆ. ಇದರಿಂದ ನಿವೇಶನರಹಿತರಿಗೆ ನಿವೇಶನ ಕೊಡುವುದಕ್ಕೆ ಬರುವುದಿಲ್ಲ. ಈಗ ಹಾಲಿ ಇರತಕ್ಕಂಥ ಗೌರ್ನಮೆಂಟ್ ಆರ್ಡರನ್ನು ವಾಪಸ್ ತೆಗೆದುಕೊಂಡು ಹೊಸದಾಗಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿದರೆ ಮಾತ್ರ ಬರುತ್ತದೆ. ಆ ಕೆಲಸ ದಯಮಾಡಿ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ : ಆಯಿತು.

ವಿಷಯ : ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿ ನೀರು ಸರಬರಾಜು ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೦೦ (೨೮೮)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿ ನೀರು ಸರಬರಾಜು ಯೋಜನೆ ಅಡಿಯಲ್ಲಿಯಾಗಲೀ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಾಗಲಿ,